## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1107
ಸದಸ್ಯರ ಹೆಸರು : ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21/09/2021
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ ಗ್ರಾಮಗಳ ನಮೂನೆ-9ರ ರಿಜಿಸ್ಟರ್ ಇಲ್ಲದ ಕಾರಣ ಸಾರ್ವಜನಿಕರಿಗೆ ಖಾತಾ ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 156 ಎಂಎಲ್‌ಆರ್ 2020 ದಿನಾಂಕ.31.03.2021ರಂತೆ ಬೆಂಗಳೂರು ಉತ್ತರ ತಾಲ್ಲೂಕಿನ ಚಿಕ್ಕಬಾಣಾವರ ಜೊತೆಗೆ ಸೋಮಶೆಟ್ಟಹಳ್ಳಿ ಗ್ರಾಮ ಪಂಚಾಯಿತಿ ಪ್ರದೇಶವನ್ನೊಳಗೊಂಡಂತೆ ಗ್ರಾಮ ಪಂಚಾಯಿತಿಯಿಂದ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.<br>ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸೋಮಶೆಟ್ಟಿಹಳ್ಳಿ ರವರಿಂದ ದಿನಾಂಕ.28.06.2021ರಂದು ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ ಗ್ರಾಮಗಳ ನಮೂನೆ-9ಕ್ಕೆ ಸಂಬಂಧಿಸಿದಂತೆ 03 ವ್ಯಾಲ್ಯೂಂ ಪುಸ್ತಕಗಳು ಪುರಸಭೆಗೆ ಹಸ್ತಾಂತರವಾಗಿರುತ್ತವೆ.<br>ಸಾರ್ವಜನಿಕರಿಂದ ಖಾತಾ ವಿತರಣೆ ಬಗ್ಗೆ ಸ್ವೀಕೃತವಾಗುವ ಅರ್ಜಿಗಳ ಕುರಿತು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುತ್ತಿದೆ. |
| ಆ | ಪುರಸಭೆ ಅಧಿಕಾರ ಹಸ್ತಾಂತರವಾದ ನಂತರ ಇಲ್ಲಿಯವರೆಗೆ ಗ್ರಾಮಠಾಣಾ ವ್ಯಾಪ್ತಿಯಲ್ಲಿ ವಿತರಿಸಿದ ಖಾತೆಗಳ ಸಂಖ್ಯೆಯೆಷ್ಟು; (ಗ್ರಾಮವಾರು ವಿವರ ನೀಡುವುದು) | ಪುರಸಭೆ ಅಧಿಕಾರ ಹಸ್ತಾಂತರವಾದ ನಂತರ ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಖಾತಾ ವಿತರಣೆ ಬಗ್ಗೆ ಈ ತಹಲ್‌ವರೆವಿಗೂ ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ. ಅರ್ಜಿಗಳು ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು. |
| ಇ | ನಮೂನೆ-9ರ ರಿಜಿಸ್ಟರ್ ಇಲ್ಲದ ಕಾರಣ ಗ್ರಾಮ ಪಂಚಾಯತಿಯ ಬೇಡಿಕೆವಹಿಸಯಲ್ಲಿನ ವಿವರಗಳ ಆಧಾರದ ಮೇಲೆ ಖಾತಾ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಖಾತಾ ಪತ್ರ ನೀಡಲು ಕೈಗೊಂಡ ಕ್ರಮವೇನು; | ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ ಗ್ರಾಮಗಳಿಗೆ ಸಂಬಂಧಿಸಿದಂತೆ ಈಗಾಗಲೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೋಮಶೆಟ್ಟಹಳ್ಳಿ ರವರಿಂದ ನಮೂನೆ-9ರ 03 ವ್ಯಾಲ್ಯೂಂ ಪುಸ್ತಕಗಳು ಹಸ್ತಾಂತರವಾಗಿದ್ದು, ಗ್ರಾಮ ಠಾಣಾ ವ್ಯಾಪ್ತಿಯ ಸಾರ್ವಜನಿಕರಿಂದ ಖಾತಾ ವಿತರಣೆ ಬಗ್ಗೆ ಅರ್ಜಿ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು. |

| | | |
|---|---|---|
| ಈ | 11ಬಿ ಸ್ವತ್ತುಗಳಿಗೆ ಖಾತಾ ಪತ್ರ ನೀಡದೇ ಇದ್ದಲ್ಲಿ ಸಾರ್ವಜನಿಕರನ್ನು ತೆರಿಗೆ ಪಾವತಿಸುವಂತೆ ಕೇಳುವುದು ನ್ಯಾಯಸಮ್ಮತವೇ? | ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಸೋಮಶೆಟ್ಟಿಹಳ್ಳಿ ಮತ್ತು ಕೆರೆಗುಡ್ಡದಹಳ್ಳಿ 11ಬಿ ರಲ್ಲಿ ನಮೂದಾಗಿರುವ ಸ್ವತ್ತುಗಳು ಅನಧಿಕೃತ ಸ್ವತ್ತುಗಳಾಗಿರುತ್ತವೆ.<br>ಸ್ಥಳೀಯ ಸಂಸ್ಥೆ ವ್ಯಾಪ್ತಿಯೊಳಗಿನ ಅನಧಿಕೃತ ಸ್ವತ್ತುಗಳು ಸಹ ಸ್ಥಳೀಯ ಸಂಸ್ಥೆಗಳು ಒದಗಿಸುವ ರಸ್ತೆ, ಬೀದಿ ದೀಪ, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು ಮುಂತಾದವುಗಳನ್ನು ಬಳಸಿಕೊಳ್ಳುವುದರಿಂದ ಇದಕ್ಕೆ ಆಸ್ತಿ ತೆರಿಗೆ ಪಾವತಿಸಿಕೊಳ್ಳಲಾಗುತ್ತದೆ. |

ಸಂಖ್ಯೆ: ನಅಇ 200 ಜಿಇಎಲ್ 2021(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು